ಸಾಕ್ಷಿಯನ್ನು ದಿ. 04.01.2023 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ ಕೆ ಆರ್ ಆರ್ ವಕೀಲರಿಂದಃ-

ಈ ದಾವೆಯಲ್ಲಿ ಯಾವ ಪರಿಹಾರವನ್ನು ಕೇಳಿ ಸಲ್ಲಿಸಿದ್ದೀರಾ ಎಂದರೆ ದೇವಸ್ಥಾನ ಸ್ವತ್ತಿನಲ್ಲಿ ಸ್ವತ್ತನ್ನು ಪ್ರತಿವಾದಿಗಳು ಅಕ್ರಮವಾಗಿ ಗೋಕುಂಟೆಯನ್ನು ಮುಚ್ಚುತ್ತಿರುವ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ . ಎಷ್ಟು ಸ್ವತ್ತಿನ ಮೇಲೆ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಐದು. ಸದರಿ ಐದು ಸ್ವತ್ತಿನಲ್ಲಿ ಪ್ರತಿವಾದಿಗಳು ಯಾವ ಸ್ವತ್ತಿನಲ್ಲಿ ಗೋಕುಂಟೆಯನ್ನು ಮುಚ್ಚುತ್ತಿದ್ದರು ಎಂದರೆ ಜಂಜರ್ ನಂ. 13 ನಲ್ಲಿ . ಸದರಿ ಜಂಜರ್ ನಂ. 13 ಖಾತೆ ಯಾರ ಹೆಸರಿನಲ್ಲಿದೆ ಎಂದರೆ ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ಹೆಸರಿನಲ್ಲಿದೆ. ಜಂಜರ್ 13 ರ ವಿಸ್ತಾರ ಎಷ್ಟು ಎಂದರೆ ಪೂರ್ವ ಪಶ್ಚಿಮ 64 ಉತ್ತರ ದಕ್ಷಿಣ 112. ಸದರಿ ಸ್ವತ್ತಿನ ಚೆಕ್ಕುಬಂದಿ ಎನೆಂದರೆ ಪೂರ್ವಕ್ಕೆ ನಂಜುಂಡಗೌಡ ರವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಹಳೇ ಗ್ರಾಮ ಉತ್ತರಕ್ಕೆ ಸುಬ್ಬಾಚಾರಿ ಜಮೀನು , ದಕ್ಷಿಣಕ್ಕೆ ಗೋಕುಂಟೆ . ಸಾಕ್ಷಿಗೆ ನಿಪಿ 4 ನ್ನು ತೋರಿಸಲಾಗಿ ಸದರಿಯಲ್ಲಿ ದಕ್ಷಿಣಕ್ಕೆ ಗೊ ಮುನಿಸ್ವಾಮಿ ಕುಂಟೆ ಇದೆ ಎಂದರೆ ಸರಿ . ಹಾಗಾದರೆ ದಕ್ದಿಣಕ್ಕೆ 1 ನೇ ಪ್ರತಿವಾದಿಯ ತಾತ ಹಾಗೂ 2 ಮತ್ತು 3 ನೇ ಪ್ರತಿವಾದಿಯ ತಂದೆಯವರಾದ ಗೌಡರವರ ಮುನಿಸ್ವಾಮಿರವರ ಕುಂಟೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ದಕ್ಷಿಣದ ಕಡೆ ತಪ್ಪಾಗಿ ನಮೂದು ಆಗಿದೆಯಾ ಎಂದರೆ ಗೋಪಾಲಸ್ವಾಮಿ ಕುಂಟೆ ಎಂದು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ . ದಕ್ಷಿಣಕ್ಕೆ ಗೋಪಾಲಸ್ವಾಮಿ ಕುಂಟೆ ಇದೆ ಎಂದು ಸುಳ್ಳಾಗಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವ ಐಟಂನ ದಾವಾ ಆಸ್ತಿಯಲ್ಲಿ ಜಂಜರ್ ನಂ. 13 ಬರುತ್ತದೆ ಎಂದರೆ ಐಟಂ ನಂ. 3 ರಲ್ಲಿ . 1 ನೇ ಐಟಂ ದಾವಾ ಆಸ್ತಿ ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದರೆ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಿದ್ದು . ಎರಡನೇ ಐಟಂ ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದರೆ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಪಟ್ಟಿದ್ದು . ಐಟಂ ನಂ. 4 ಮತ್ತು 5 ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದರೆ ಗ್ರಾಮ ಪಂಚಾಯಿತಿಗೆ ಸೇರಿದ್ದು .

ಐಟಂ ನಂ. 4 ಮತ್ತು 5 ಆಸ್ತಿಯ ನಂಬರ್ ಎನೆಂದರೆ ಮೂರನೇ ಐಟಂನಲ್ಲಿ 4 ಮತ್ತು 5 ಸೇರಿರುತ್ತದೆ . ಸದರಿ 3 ಮತ್ತು 4 , 5 ಐಟಂಗಳಿಗೆ ಈ ಮೇಲೆ ತಿಳಿಸಿದೆ ಚೆಕ್ಕುಬಂದಿ ಇರುತ್ತದೆಯೆ ಎಂದರೆ ಹೌದು . ಐಟಂ ನಂ. 3 ದಾವಾ ಸ್ವತ್ತಿನಲ್ಲಿ ಮೂರು ವಿಸ್ತೀರ್ಣದ ಬಗ್ಗೆ ನಮೂದು ಆಗಿರುತ್ತದೆ ಎಂದರೆ ಸರಿ . ಐಟಂ ನಂ. 3 ದಾವಾ ಸ್ವತ್ತಿನಲ್ಲಿ ದಕ್ಷಿಣದ ಕಡೆ ಎನು ಇದೆ ಎಂದರೆ ಗೋಪಾಲಸ್ವಾಮಿ ಕುಂಟೆ . ಸಾಕ್ಷಿಗೆ ದಾವಾ ಪತ್ರವನ್ನು ತೋರಿಸಿ ಅದರಲ್ಲಿ ಐಟಂ ನಂ. 3 ದಾವಾ ಸ್ವತ್ತಿನ ದಕ್ಷಿಣ ಕಡೆ ಹಿಂದೆ ಗೋಪಸಂದ್ರ ಮುನಿಸ್ವಾಮಿ ಕುಂಟೆ ಈಗ ಕೃಷ್ಣರಾಜುರವರ ಮನೆ ಎಂದು ನಮೂದು ಅಗಿರುತ್ತದೆ ಎಂದರೆ ಸರಿ . ಸದರಿ ಗೋಪಸಂದ್ರ ಮುನಿಸ್ವಾಮಿ ಯಾರು ಎಂದರೆ 1 ನೇ ಪ್ರತಿವಾದಿಯರವರ ತಾತ ಹಾಗೂ 2 ಮತ್ತು 3 ನೇ ಪ್ರತಿವಾದಿಯ ತಂದೆ . 3 ನೇ ಐಟಂ ಸ್ವತ್ತು ದಾವಾ ಸ್ವತ್ತಿನ ದಕ್ಷಿಣಕ್ಕೆ ಸದರಿ ಗೋಪಸಂದ್ರ ಮುನಿಸ್ವಾಮಿರವರ ಸ್ವತ್ತು ಇದೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಕೃಷ್ಣರಾಜುರವರ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ . ಹಾಗಾದರೆ ಸದರಿ ಕುಂಟೆಯನ್ನು ಯಾರು ಮುಚ್ಚಿ ಮನೆ ಕಟ್ಟಿರುತ್ತಾರೆ ಎಂದರೆ 1 ನೇ ಪ್ರತಿವಾದಿ .

1 ನೇ ಐಟಂ ದಾವಾ ಸ್ವತ್ತಿನಲ್ಲಿ ಸೇದು ಬಾವಿ ಎಂದು ಬರೆಸಿರುತ್ತೇವೆ ಎಂದರೆ ಸರಿ . ಸದರಿ ಸೇದು ಬಾವಿ ಈಗ ಇರುತ್ತದೆಯೆ ಎಂದರೆ ಇಲ್ಲ ಮುಚ್ಚಿರುತ್ತದೆ . ಸದರಿ ಸೇದು ಬಾವಿಯನ್ನು ಮುಚ್ಚಿ 3 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸೇದು ಬಾವಿಯ ವಿಸ್ತೀರ್ಣ ಎಷ್ಟು ಎಂದರೆ 6 ರಿಂದ 7 ಅಡಿ ಇರಬಹುದು . ಐಟಂ ನಂ. 1 ದಾವಾ ಆಸ್ತಿಯು ವಿಸ್ತೀರ್ಣಲ್ಲಿ ಎನು ಇದೆ ಎಂದರೆ ಮರಗಳಿಗೆ ರಚ್ಚೆ ಕಟ್ಟಿರುವುದು ಮತ್ತು ಸೇದು ಬಾವಿ . ಸದರಿ ವಿಚಾರವನ್ನು ದಾವಾ ಸ್ವತ್ತಿನಲ್ಲಿ ತಿಳಿಸಿರುತ್ತೀರಾ ಎಂದರೆ ತಿಳಿಸಿರುತ್ತೇನೆ. ಐಟಂ ನಂ.1 ರ ಚೆಕ್ಕು ಬಂದಿ ಎನು ಎಂದರೆ ಪೂರ್ವಕ್ಕೆ ಗೋಪಸಂದ್ರ ಮುನಿಸ್ವಾಮಿರವರ ಜಮೀನು ಪಶ್ಚಿಮಕ್ಕೆ ರಸ್ತೆ ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ದೇವಸ್ಥಾನದ ಜಾಗ . ಸದರಿ ಸ್ವತ್ತು ಊರಿನಲ್ಲಿ ಒಳಗಡೆ ಅಥವಾ ಹೊರಗಡೆ ಬರುತ್ತದೆಯೇ ಎಂದರೆ ಊರಿನ ದಕ್ಷಿಣ ಕಡೆ ಬರುತ್ತದೆ . ಸದರಿ 1 ನೇ ಐಟಂ ಚೆಕ್ಕುಬಂದಿಯನ್ನು ದಾವಾ ಪತ್ರದಲ್ಲಿ ಸುಳ್ಳಾಗಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚಾಯಿತಿ ದಾಖಲೆಗಳ ಪ್ರಕಾರ ಸಿರಿಯಲ್ ನಂ. 105

ಅಸೆಸ್ಮೆಂಟ್ ನಂ. 52 ರ ವಿಸ್ತೀರ್ಣ 19 ಇಂಟು 12 ಎಂದು ನಮೂದು ಅಗಿರುತದೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ಒಳಗಡೆ ಸೇದು ಬಾವಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸೇದು ಬಾವಿಯ ಪೂರ್ವಕ್ಕೆ ಅಣ್ಣಯ್ಯರವರ ಹುಣಸೇ ಮರ ಇತ್ತು ಈಗ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ದಕ್ಷಿಣಕ್ಕೆ ವೆಂಕಟರಾಜು ಹಾಗೂ ಮುನಿಸ್ವಾಮಿ ಶೆಟ್ಟಿ ರವರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಪತ್ರದಲ್ಲಿ ತಿಳಿಸಿರುವ ಹಾಗೆ ಸೇದು ಬಾವಿ ಇರುವುದಿಲ್ಲ ಹಾಗೂ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸೇದು ಬಾವಿ ಇರುವ ಜಾಗ 3 ನೇ ವಾದಿ ಮನೆ ಕಟ್ಟಿ ರುತ್ತಾರೆ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿ ದೇವಸ್ಥಾನ ಜಾಗ ಹಾಗೂ ಅದಕ್ಕೆ ಸಂಬಂಧಪಟ್ಟ ಜಾಗ ಪೂರ್ವ ಪಶ್ಚಿಮ 100 ಅಡಿ ಉತ್ತರ ದಕ್ಷಿಣ 105 ಅಡಿ ಎಂದರೆ ಸರಿ. ಸದರಿ ವಿಸ್ತೀರ್ಣದ ಪೈಕಿ 12 ಇಂಟು 10 ಅಡಿಯಲ್ಲಿ ದೇವಸ್ಥಾನ ಇದೆ ಎಂದರೆ ಸರಿ . ಸದರಿ 100 ಇಂಟು 105 ಅಡಿ ಸ್ವತ್ತಿನ ಒಳಗಡೆ ಹುಣಸೇ ಮರ ಮತ್ತು ಬೆಲ್ಲದ ಮರ ಇರುವುದಿಲ್ಲ ಎಂದರೆ ಸರಿ . ಸದರಿ ಹುಣಸೇ ಮರ ಮತ್ತು ಬೆಲ್ಲದ ಮರಗಳು ಪಂಚಾಯಿತಿ ರೆಕಾರ್ಡಿನ ಪ್ರಕಾರ ಸೀರಿಯಲ್ ನಂ. 56 ಮತ್ತು ಅಸೆಸ್ಮೆಂಟ್ ನಂ. 96 ರಲ್ಲಿ ಬರುತ್ತದೆ ಎಂದರೆ ಸರಿ . ಸದರಿ ಬೆಲ್ಲದ ಮರವನ್ನು ಕಡಿದು ಹಾಕಿರುತ್ತಾರೆ ಹುಣಸೇ ಮರ ಇರುತ್ತದೆ ಎಂದರೆ ಎರಡೂ ಮರಗಳನ್ನು ಕುಯಿದು ಹಾಕಿರುತ್ತಾರೆ. ಸದರಿ ಮರಗಳು ಪ್ರತಿವಾದಿಯವರ ಗೋಪಸಂದ್ರ ಮುನಿಸ್ವಾಮಿ ಖರೀದಿ ಮಾಡಿರುವ ಆಸ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಮರಗಳು ಪ್ರತಿವಾದಿಯವರ ಅನುಭವದಲ್ಲಿರುವ ಜಾಗದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನೈತಿಕವಾಗಿ ನನಗೆ ಸಂಬಂಧವಾಗಿರುವುದಿಲ್ಲ ಎಂದರೆ ಸರಿ . ಪಂಚಾಯಿತಿಯವರು ಪ್ರತಿವಾದಿಗಳಿಗೆ ನೋಟೀಸು ನೀಡಿದ್ದಾರ ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿಗೆ ಸೇರಿದ ಜಾಗ ಸರ್ಕಾರದ್ದು ಎಂದರೆ ಸರಿ . ಯಾರಾದರೂ ಸರ್ಕಾರಕ್ಕೆ ಸೇರಿದ ಜಾಗವನ್ನು ಅತಿಕ್ರಮ ಮಾಡಿದರೆ ಅದಕ್ಕೆ ಪಂಚಾಯಿತಿಯವರು ಕ್ರಮ ತೆಗೆದುಕೊಳ್ಳಬೇಕು ಎಂದರೆ ಸರಿ . ಹಾಗಾದರೆ ಪಂಚಾಯಿತಿಯವರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎನಾದರೂ ಕ್ರಮ ತೆಗೆದುಕೊಂಡಿದ್ದಾರ ಎಂದರೆ ಹೌದು ಸಾಕ್ಷಿ

ಮುಂದುವರೆದು ಸರ್ವೆ ಮಾಡಿರುತ್ತಾರೆ . ನಿಪಿ 6 ದಾಖಲೆ ಯಾವುದಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸಾಕ್ಷಿಯು ನಿಪಿ 6 ನ್ನು ನೋಡಿ ನಾಗಸಂದ್ರ ಗಡಿ ಭಾಗವನ್ನು ಗುರುತಿಸಲು ಕೊಟ್ಟಿರುವ ದಾಖಲೆ . ಸಾಕ್ಷಿಗೆ ನಿಪಿ 10 ನ್ನು ತೋರಿಸಲಾಗಿ ಅದರಲ್ಲಿ ದಕ್ಷಿಣಕ್ಕೆ ಗೋಸಂದ್ರ ಮುನಿಸ್ವಾಮಿ ಕುಂಟೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ದಾವಾ ಸ್ವತ್ತು 3 ನೇ ಐಟಂನಲ್ಲಿ 64 ಇಂಟು 112 ವಿಸ್ತೀರ್ಣದಲ್ಲಿ ಪೂರಾ ಮನಗೆಳು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ದಕ್ಷಿಣಕ್ಕೆ ಗೋಪಸಂದ್ರದ ಮುನಿಸ್ವಾಮಿರವರ ಕುಂಟೆ ಇರುತ್ತದೆ ಎಂದರೆ ಸರಿಯಲ್ಲ . ಆದ ಕಾರಣ ನಿಪಿ 10 ರಲ್ಲಿ ಸದರಿ ಜಾಗ ಗೋಪಸಂದ್ರ ಮುನಿಸ್ವಾಮಿ ರವರ ಜಾಗ ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ.

ಮುನಿಸ್ವಾಮಿ ಬಿನ್ ಪಾಪರಾಜು ಎಂದರೆ ನನ್ನ ಮಾವ . 1 ನೇ ಪ್ರತಿವಾದಿಯರ ಅಜ್ಜಿ 2 ಮತ್ತು 3 ನೇ ಪ್ರತಿವಾದಿಯರ ತಾಯಿ ನಂಜಮ್ಮ ರವರು ಮತ್ತು 1 ನೇ ಪ್ರತಿವಾದಿಯ ತಂದೆ ಬಿಸಪ್ಪರವರು ನನ್ನ ಮಾವ ವಿರುದ್ಧ ಒಎಸ್ ನಂ. 306/1991 ದಾವೆ ಹೂಡಿರುತ್ತಾರೆ ಎಂದರೆ ಸರಿ . ಸದರಿ ದಾವೆಯನ್ನು ಗೋಪಸಂದ್ರ ಮುನಿಸ್ವಾಮಿ ಕುಂಟೆ ಜಾಗವನ್ನು ಅತಿಕ್ರಮಿಸಿದ ಕಾರಣ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಪುರಸ್ಕಾರವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗವನ್ನು 1 ನೇ ಪ್ರತಿವಾದಿಯ ತಂದೆ ನ್ಯಾಯಾಲಯದ ಮುಖಾಂತರ ಪಡೆದುಕೊಂಡಿ ರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಮಲ್ಜಾರಿ ನಂ. 31/1994 ರಂತೆ ಜಾಗವನ್ನು ಸ್ವಾಧೀನ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಹಾಗೂ 3 ನೇ ಐಟಂ ದಾವಾ ಸ್ವತ್ತು ಎರಡೂ ಒಂದೇ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಖಾಂತರ ಆಸ್ತಿಯನ್ನು ಪಡೆದುಕೊಂಡ ನಂತರ ನಂಜಮ್ಮ , ಬಿಸಪ್ಪ ಮತ್ತು ಅವರ ಮಕ್ಕಳು ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಅವರ ಅನುಬೋಗದಲ್ಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೊಟೋ ತೋರಿಸಲಾಗಿ ಅದರಲ್ಲಿರುವ ಆಸ್ತಿಯೇ ನ್ಯಾಯಾಲಯದ

ಮುಖಾಂತರ ಪಡೆದುಕೊಂಡಿರುವ ಆಸ್ತಿ ಎಂದರೆ ಸರಿಯಲ್ಲ. ಸದರಿ ಫೋಟೋದಲ್ಲಿ ಕಾಂಪೌಂಡ್ ಒಳಗಡೆ ಇರುವ ಜಾಗ ಗೋಪಸಂದ್ರ ಮುನಿಸ್ವಾಮಿರವರ ಕುಂಟೆ ಇದ್ದಿದ್ದು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಗೋಪಾಲಸ್ವಾಮಿ ದೇವಸ್ಥಾನಕ್ಕೆ ಸೇರಿದ ಕುಂಟೆ ಎಂದು ನುಡಿಯುತ್ತಾರೆ . ಸದರಿ ದೇವಸ್ಥಾನಕ್ಕೆ ಸೇರಿದ ಜಾಗ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ನಿಪಿ 15 . ನಿಪಿ 15 ರಲ್ಲಿ ಗೋಪಾಲಸ್ವಾಮಿ ದೇವಸ್ಥಾನ ಕುಂಟೆ ಇರುವುದಿಲ್ಲ ಗೋಪಸಂದ್ರ ಮುನಿಸ್ವಾಮಿ ಗೌಡ ಹಾಗೂ ಬಾವಿ ಎಂದು ಇರುತ್ತದೆ ಎಂದರೆ ಸರಿಯಲ್ಲ. ನಿಪಿ 15 ರಲ್ಲಿ ಚೆಕ್ಕುಬಂದಿಯಲ್ಲಿ ಉತ್ತರಕ್ಕೆ ಗೋಪಸಂದ್ರ ಮುನಿಸ್ವಾಮಿ ಕುಂಟೆ ಎಂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಗೋಸಂದ್ರ ಮುನಿಸ್ವಾಮಿ ಕುಂಟೆ ಎಂದು ನಮೂದು ಆಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಮಾವ ನ್ಯಾಯಾಲಯದಲ್ಲಿ ಪಡೆದುಕೊಂಡಿರುವ ಆಸ್ತಿಯ ವಿಚಾರವಾಗಿ ಸುಳ್ಳಾಗಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿಗಳನ್ನು ಸುಳ್ಳಾಗಿ ತೋರಿಸಿರುತ್ತೇವೆಂದರೆ ಸರಿಯಲ್ಲ. ವಾದಿಯರು 2 ರಿಂದ 5 ನನಗೆ ಬೇಕಾದವರು ಎಂದರೆ ನಮ್ಮ ಊರಿನವರು. 2 ಮತ್ತು 3 ನೇ ವಾದಿಗಳು ಪಂಚಾಯಿತಿ ಜಾಗವನ್ನು ಅತಿಕ್ರಮಿಸಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಬೆಳಕಿಗೆ ಬರುತ್ತದೆ ಎಂದು ಸದರಿಯವರನ್ನು ಸಾಕ್ಷಿ ಹೇಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನವರ ಮೇಲಿರುವ ಜಿದ್ದನ್ನು ತೀರಿಸಿಕೊಳ್ಳಲು ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. 1 ಮತ್ತು 2 ನೇ ದಾವಾ ಸ್ವತ್ತಿಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿರುವ ಜಾಗಗಳು ಪಂಚಾಯಿತಿಯದ್ದಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿ ದೇವಸ್ಥಾನ ಮತ್ತು ಕುಂಟೆಯ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಗಳ ವ್ಯವಸಾಯ ಜಮೀನು ಇರುತ್ತದೆ ಎಂದರೆ ಪೂರ್ವಕ್ಕೆ ಇರುತ್ತದೆ ದಕ್ಷಿಣಕ್ಕೆ ಇರುವುದಿಲ್ಲ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದರಲ್ಲಿ ಗೋಪಾಲಸ್ವಾಮಿ ದೇವಸ್ಥಾನ ಇರುತ್ತದೆ ಎಂದರೆ ಸರಿ . ಸಾಕ್ಷಿ ಸದರಿ

ಪೊಟೋವನ್ನು ಒಪ್ಪಿಕೊಂಡ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು . ಸಾಕ್ಷಿಗೆ ಮತ್ತೊಂದು ಪೊಟೋವನ್ನು ತೋರಿಸಲಾಗಿ ದೇವಸ್ಥಾನದ ಉತ್ತರಕೆ ಚಪ್ಪಡಿ ಕಲ್ಲು ಇರುತ್ತದೆ ಎಂದರೆ ಸರಿ ಸದರಿ ಚಪ್ಪಡಿ ಕಲ್ಲುಗಳನ್ನು ಪ್ರತಿವಾದಿಗಳು ನೆಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ಗಲಾಟೆ ಮಾಡಿ ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಪೋಟವನ್ನು ನಿಡಿ 2 ಎಂದು ಗುರುತಿಸಲಾಯಿತು. ಸದರಿ ಗಲಾಟೆ ಬಗ್ಗೆ ದೂರು ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿದ್ದೇನೆ. ಸದರಿ ದೂರಿಗೆ ಸಂಬಂಧಪಟ್ಟಂತೆ ದಾಖಲೆ ಹಾಜರು ಪಡಿಸಿದ್ದಿರಾ ಎಂದರೆ ಹಾಜರುಪಡಿಸಿರುತ್ತೇನೆ. ನಿಪಿ 17 , 18 ನ್ನು ಸಾಕ್ಷಿಗೆ ತೋರಿಸಲಾಗಿ ಸಂಬಂಧಪಟ್ಟಂತೆ ಪ್ರತಿವಾದಿಗಳ ವಿರುದ್ಧ ಎನು ಕ್ರಮ ಕೈಗೊಂಡಿದ್ದಾರೆ ಎಂದರೆ ಸರ್ವೆ ಮಾಡಿದ್ದಾರೆ ಸದರಿ ಸರ್ವೆಗೆ ಸಂಬಂಧಪಟ್ಟಂತೆ ಬಾಜುದಾರರಿಗೆ ನೋಟೀಸು ನೀಡಿದ್ದಾರಾ ಎಂದರೆ ನೀಡಿರುತ್ತಾರೆ. ಸದರಿ ನೋಟೀಸನ್ನು ಹಾಜರುಪಡಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆಗೆ ಸಂಬಂಧಪಟ್ಟಂತೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಹಾಜರುಪಡಿಸಿರುತ್ತೇನೆ . ಸದರಿ ಸರ್ವೆಯನ್ನು ಮಾಡಿಸಿರುವುದಿಲ್ಲ ಮತ್ತು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ 1 ರಿಂದ 34 ದಾವೆಗಾಗಿ ಸೃಷ್ಟಿ ಸಿರುತ್ತೇನೆಂದರೆ ಸರಿಯಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓದಿ ಹೇಳಿ ಕೇಳಿ ಸರಿ ಇದೆ.

**(ಸ್ನೇಹಾ ಎಂ)**
ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮುಳಬಾಗಿಲು.